# ಭೂಪಟಗಳು



ನಾನು ಶಾಲೆಯಲ್ಲಿ ಬರೆದ ಭೂಪಟಗಳಲ್ಲಿ
ದೆಹಲಿಯು ಪಾಕಿಸ್ತಾನದಲ್ಲಿತ್ತು,
ಆಮ್‌ಸ್ಟರ್‌ಡೇಮ್ ಜರ್ಮನಿಯಲ್ಲಿ
ಮತ್ತು ಫಿಜಿಯು ಅಟ್ಲಾಂಟಿಕ್ ಸಾಗರದಲ್ಲಿತ್ತು.

ಹಸಿವಾದಾಗೆಲ್ಲ ನಾನು
ಆಫ್ರಿಕಾದ ಒಂಚೂರು ತಿಂದೆ;
ಗೆಳೆಯ ವಾಸುವಿಗೆಂದು ಆಸ್ಟ್ರೇಲಿಯವನ್ನು ಕಿತ್ತುಕೊಟ್ಟೆ.

ರಾತ್ರಿ ಹೊತ್ತಲ್ಲಿ ಇಟಲಿಯು ನಮ್ಮನ್ನು ಒದ್ದು ನೂಕಿತು,
ಚಿಲಿಯು ಹೆಡೆಯೆತ್ತಿತು,
ಸ್ಕ್ಯಾಂಡಿನೇವಿಯವು ಗರ್ಜಿಸುತ್ತ ನಮ್ಮ ಮೇಲೆರಗಿತು.


ಭೂಗೋಳದಲ್ಲಿ ದಕ್ಕಿದ ಒಂದೆರಡು ಅಂಕಿಗಳನ್ನು
ನಾನು ಮೊಹಮದನ ಜೊತೆ ಹಂಚಿಕೊಂಡೆ

ಬೆಳೆಯತೊಡಗಿದ ಹಾಗೆ, ನಾನು ಲೋಕದರ್ಶನ ಮಾಡಿದೆ.
ಪ್ರೀತಿಯ ಗುರುಗಳೇ, ಪ್ರತಿಯೊಂದು ಸ್ಥಳವೂ
ಭೂಪಟದಲ್ಲಿ ಕಂಡದ್ದಕ್ಕಿಂತ ಎಷ್ಟೊಂದು ಭಿನ್ನವಾಗಿತ್ತು–
ನೀಲಿ ಗೆರೆಗಳು ಗುಳುಗುಳಿಸುವ ನದಿಗಳಾದವು,
ಹಸಿರು ಚುಕ್ಕೆಗಳು ಕಡುಭಯಂಕರ ಕಾಡುಗಳಾದವು,
ಮತ್ತು ಅಷ್ಟೆಲ್ಲ ಖಾಲಿ ಜಾಗದಲ್ಲಿ
ಜನರಿದ್ದರು, ಪ್ರಾಣಿ, ಪಕ್ಷಿಗಳಿದ್ದವು,
ಬೆಟ್ಟಗಳಿದ್ದವು, ರಾತ್ರಿಗಳಿದ್ದವು,
ಮತ್ತು ಕವಿತೆಯಿತ್ತು.

ಈಗ ಯಾರೋ ಭೂಪಟಗಳ ಜೊತೆ ಆಟವಾಡುತ್ತಿದ್ದಾರೆ,
ಭೂಮಿಯನ್ನು ಹರಿದು ಹಂಚುತ್ತ, ಇರುವುದ ತರಿದು ಹಾಕುತ್ತಾರೆ,
ಇರುವುದಕ್ಕೆ ಇನ್ನೊಂದು ಅಂಟಿಸುತ್ತಾರೆ,
ಮಡಚುತ್ತಾರೆ, ನುಜ್ಜುಗುಜ್ಜು ಮಾಡುತ್ತಾರೆ.

ಇಲ್ಲಿ ಇವನು
ಬೆದರಿಸುವ ಬೆತ್ತವ ಕೈಯಲ್ಲಿ ಹಿಡಿದು
ಇಡೀ ಜಗತ್ತಿಗೆ
ಭೂಗೋಳದ,

ಇತಿಹಾಸದ
ಪಾಠ ಮಾಡುತ್ತಿದ್ದಾನೆ.



**ಮೂಲ ಕವಿತೆಯ ಹೆಸರು:** Maps **(ಮ್ಯಾಪ್ಸ್)**